ಮೈಸೂರು ವಿಶ್ವವಿದ್ಯಾನಿಲಯ

ಸಂಖ್ಯೆ:ಡಿಓಆರ್9.5/ಪಿಹೆಚ್.ಡಿ/ಸಿಂಡಿಕೇಟ್/2022–23

ಕುಲಸಚಿವರು(ಪರೀಕ್ಷಾಂಗ) ರವರ ಕಛೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಮೈಸೂರು.

ದಿನಾಂಕ: 28/02/2023

## ಸುತ್ತೋಲೆ

ವಿಷಯ: 2020ರಲ್ಲಿ ನಡೆದ ಪಿಹೆಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪಿಹೆಚ್.ಡಿಗೆ ನೊಂದಣಿಯಾಗಲು ಇರುವ ಕಾಲಮಿತಿಯನ್ನು ವಿಸ್ತರಿಸುವ ಬಗೆಗೆ.

ಉಲ್ಲೇಖ: 1. ಈ ಕಛೇರಿ ಪತ್ರದ ಸಂಖ್ಯೆ: ಡಿಓಆರ್ 9.5/ಪಿಹೆಚ್.ಡಿ/ಸಿಂಡಿಕೇಟ್/2022–23, ದಿನಾಂಕ: 03/02/2023.
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 22/02/2023.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ **ದಿನಾಂಕ: 29/01/2021ರಂದು** ಪ್ರಕಟಗೊಂಡ 2020ನೇ ಸಾಲಿನ ಪಿಹೆಚ್.ಡಿ ಪ್ರವೇಶ ಪರೀಕ್ಷೆಯ ಫಲಿತಾಂಶದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ತಾತ್ಕಾಲಿಕ ನೊಂದಣಿಯಾಗಲು 02 ವರ್ಷಗಳ ಕಾಲ ಅಂದರೆ **28/01/2023** ರವರೆಗೆ ಅವಕಾಶ ನೀಡಲಾಗಿತ್ತು. ಆದರೆ ಕೋವಿಡ್–19 ನಿಂದಾಗಿ ಪಿಹೆಚ್.ಡಿ ಅಂತಿಮ ವರ್ಷದಲ್ಲಿ ಸಂಶೋಧನೆ ಮಾಡುತ್ತಿದ್ದ ಅಭ್ಯರ್ಥಿಗಳಿಗೆ ಯು.ಜಿ.ಸಿಯು ಮಹಾಪ್ರಭಂಧ ಸಲ್ಲಿಸಲು 02 ವರ್ಷ 09 ತಿಂಗಳುಗಳ ಹೆಚ್ಚುವರಿ ಕಾಲಾವಕಾಶ ನೀಡಿದ್ದ ಕಾರಣದಿಂದಾಗಿ ಕೆಲ ಅರ್ಹ ಅಭ್ಯರ್ಥಿಗಳಿಗೆ ಹೊಸದಾಗಿ ನೊಂದಣಿಯಾಗಲು ಸಾಧ್ಯವಾಗದ ಕಾರಣ ದಿನಾಂಕ **03/02/2023ರಂದು** ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ಪಿಹೆಚ್.ಡಿಗೆ ನೊಂದಣಿಯಾಗಲು ಇದ್ದ 02 ವರ್ಷದ ಕಾಲಾಮಿತಿಯ ಜೊತೆಗೆ ಹೆಚ್ಚುವರಿಯಾಗಿ 06 ತಿಂಗಳುಗಳ ಕಾಲಾವಕಾಶವನ್ನು ಅಂದರೆ **ದಿನಾಂಕ: 28/07/2023** ರವರೆಗೆ ವಿಸ್ತರಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

4/3/23

ಕುಲಸಚಿವ(ಪರೀಕ್ಷಾಂಗ)